**ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ನರಸಿಂಹರಾಜ ಚೌಕ, ಬೆಂಗಳೂರು-560002.**
**ದೂರವಾಣಿ : 080-22237455 / 080-22221286, ಫ್ಯಾಕ್ಸ್ : 080-22223194**
**ಇ-ಮೇಲ್ : comm@bbmp.gov.in**

ಸಂಖ್ಯೆ: ಬಿಬಿಎಂಪಿ/ಆ.ಆ.ಶಾ/ಪಿಎಸ್‌ಆರ್/110/2019-20 ಮಾರ್ಚ್ 11, 2020

ವಿಷಯ:- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಖಾಲಿ ನಿವೇಶನಗಳಲ್ಲಿ ಕಸದ ರಾಶಿ,ಡೆಬ್ರಿಸ್‌ಗಳನ್ನು ತೆರವುಗೊಳಿಸಲು ಕೆ.ಎಂ.ಸಿ. ಕಾಯ್ದೆ ಅನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

ಉಲ್ಲೇಖ:- ಸುತ್ತೋಲೆಯ ಸಂಖ್ಯೆ:-ಬಿ.ಬಿ.ಎಂ.ಪಿ./ಜಂಟಿ ಆಯುಕ್ತರು( ಆರೋಗ್ಯ)/ಪಿಆರ್-ಎಫ್ 825/15-16, ದಿನಾಂಕ:-27/07/2015

***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಹಲವಾರು ಖಾಲಿ ನಿವೇಶನಗಳಲ್ಲಿ ಗಿಡಗಂಟಿಗಳು ಬೆಳೆದಿದ್ದು, ಕಸದ ರಾಶಿ, ಡೆಬ್ರಿಸ್‌ಗಳನ್ನು ಹಾಕಿರುವುದು ಕಂಡು ಬಂದಿರುತ್ತದೆ. ಖಾಲಿ ನಿವೇಶಗಳಲ್ಲಿನ ಕಸದ ರಾಶಿ ಮತ್ತು ಭಗ್ನಾವಶೇಷಗಳನ್ನು ತೆರವುಗೊಳಿಸುವ ಕುರಿತು, ಸಂಬಂಧಪಟ್ಟ ವಾರ್ಡ್ ಅಭಿಯಂತರರು, ಆರೋಗ್ಯ ಪರಿವೀಕ್ಷಕರು ಮತ್ತು ಘನತ್ಯಾಜ್ಯ ನಿರ್ವಹಣೆಯ ಅಭಿಯಂತರರು ಹಾಗೂ ಅವರ ಮೇಲಾಧಿಕಾರಿಗಳು ಈ ಕೆಳಕಂಡಂತೆ ಕ್ರಮ ಜರುಗಿಸಲು ಸೂಚಿಸಿದೆ.

ಕೆಳಕಂಡಂತೆ ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976ರ ಕಲಂ 256,257,332,333 ಹಾಗೂ 335ರಡಿ ಆಯುಕ್ತರಿಗೆ ಅಧಿಕಾರ ನೀಡಲಾಗಿರುತ್ತದೆ.

**ಕಲಂ 256: ಅಧಿಭೋಗದಾರರಿಂದ ಕಸ ಮತ್ತು ಹೊಲಸಿನ ಶೇಖರಣೆಯ ಬಗ್ಗೆ ಆದೇಶಿಸಿರುವ ಸಾರ್ವಜನಿಕ ನೋಟೀಸು.**
**ಕಲಂ 257: ಆವರಣದ ಮೇಲೆ ಹೆಚ್ಚಿನ ಪ್ರಮಾಣದಲ್ಲಿ ರಾಶಿಗೂಡುವ ಕಸ ಅಥವಾ ಹೊಲಸನ್ನು ತೆಗೆದು ಹಾಕುವುದು.**
**ಕಲಂ 332: ಒಕ್ಕಲಿಲ್ಲದ ಕಟ್ಟಡಗಳು ಅಥವಾ ಭೂಮಿಗಳು.**
**ಕಲಂ 333: ಹೊಲಸು ಅಥವಾ ಹಾನಿಕರ ಸಸ್ಯಗಳನ್ನು ತೆಗೆದು ಹಾಕುವುದು.**
**ಕಲಂ 335: ಕಟ್ಟಡಗಳು ಅಥವಾ ಭೂಮಿಗಳಿಗೆ ಬೇಲಿ ಹಾಕುವುದು ಮತ್ತು ಹಸಿರು ಬೇಲಿಗಳು ಮತ್ತು ಮರಗಳ ಸವರುವಿಕೆ.**

ಸಾರ್ವಜನಿಕರ ಬೀದಿಗೆ ಸಮೀಪವಿರುವ/ಪಕ್ಕದಲ್ಲಿರುವ/ಹೊಂದಿಕೊಂಡಿರುವ ಯಾವುದೇ ಕಟ್ಟಡ ಅಥವಾ ಖಾಲಿ ಭೂಮಿಯ ಒಡೆಯ ಅಥವಾ ಅಧಿಭೋಗದಾರರು:-

ಎ) ಪರಿಸರ ಮಾಲಿನ್ಯವಾಗದಂತೆ ಸೂಕ್ತವಾಗಿ ನಿವೇಶನಕ್ಕೆ ಬೇಲಿ ಹಾಕಲು ಅಥವಾ
ಬಿ) ಸದರಿ ನಿವೇಶನದಲ್ಲಿನ ಬೇಲಿಯು ರಸ್ತೆಗೆ ಬಾರದಂತೆ ಬೇಲಿಯ ಅಂಚನ್ನು ಕತ್ತರಿಸಿ ಸಮ ಮಾಡುವುದು ಅಥವಾ
ಸಿ) ಸದರಿ ನಿವೇಶನಕ್ಕೆ ಹೊಂದಿಕೊಂಡಂತೆ ಇರುವ ಬೀದಿಯ ಮೇಲೆ ಚಾಚಿಕೊಂಡಿರುವ ಮತ್ತು ಅದನ್ನು ಅಥವಾ ಸಂಚಾರದ ದೃಷ್ಟಿಯನ್ನು ಅಡ್ಡಿಪಡಿಸುವ ಅಥವಾ ಅದಕ್ಕೆ ಹಾನಿಪಡಿಸುವ ಯಾವುದೇ ಹಸಿರು ಬೇಲಿಗಳನ್ನು ಮತ್ತು ಮರಗಳನ್ನು ಕತ್ತರಿಸಲು ಮತ್ತು ಕತ್ತರಿಸಿ ಸಮ ಮಾಡಲು; ಅಥವಾ
ಡಿ) ಸರಿ ನಿವೇಶನದಲ್ಲಿ ಅಡ್ಡಿಪಡಿಸುವ ಅಥವಾ ಅಪಾಯವನ್ನು ಉಂಟು ಮಾಡುವ ಹಾಗೆ ಸುತ್ತುವರಿದಿರುವ ಗೋಡೆ ಅಥವಾ ಬೇಲಿಯನ್ನು ಸಂಚಾರದ ದೃಷ್ಟಿಯಿಂದ ಎತ್ತರವನ್ನು ತಗ್ಗಿಸುವುದು.

ಮೇಲಿನ ಕಲಂ 256, 257, 332, 333 ಹಾಗೂ 335 ರನ್ವಯ ಗಿಡಗಂಟೆ, ಕಸ ಹಾಗೂ ಡೆಬ್ರಿಸ್ ತುಂಬಿರುವ ಖಾಲಿ ನಿವೇಶನದ ಮಾಲೀಕರಿಗೆ ಕಲಂ 257 ರಡಿ ಈ ಕೆಳಕಂಡಂತೆ ನಿರ್ದೇಶಿಸಿ, ಸ್ವತ್ತಿನ ಮಾಲೀಕರಿಗೆ ನೋಟೀಸ್‌ನ್ನು ವಲಯ ಜಂಟಿ ಆಯುಕ್ತರು ನೀಡತಕ್ಕದ್ದು. ನೋಟೀಸಿನ ಮಾದರಿ ನಮೂನೆಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದೆ.

ಎ) ಸದರಿ ನಿವೇಶನದಲ್ಲಿ ಇರುವಂತಹ ಗಿಡಗಿಂಟೆ, ಕಸದ ರಾಶಿ ಹಾಗೂ ಡೆಬ್ರಿಸ್‌ಗಳನ್ನು 3 ದಿನಗಳೊಳಗಾಗಿ ತೆರವುಗೊಳಿಸುವುದು.

ಬಿ) ಅಗತ್ಯವಿದ್ದಲ್ಲಿ ಸದರಿ ನಿವೇಶನದ ಸುತ್ತಲೂ ಕಾಂಪೌಡ್ ಗೋಡೆ ನಿರ್ಮಿಸಲು ಸೂಚಿಸುವುದು.

ಸದರಿ ನೋಟೀಸ್‌ನ್ನು ನೋಂದಾಯಿತ ಸ್ವೀಕೃತಿ ಅಂಚೆ (RPAD) ಮೂಲಕ ರವಾನಿಸುವುದು. ಜೊತೆಗೆ ಒಂದು ಪ್ರತಿಯನ್ನು ಸ್ವತ್ತಿನ ಮೇಲೆ ಅಂಟಿಸಿ, ಮಹಜರ್ ಮಾಡಿ ಫೋಟೋ ತೆಗೆಯುವುದು.

ಪಾಲಿಕೆ ವತಿಯಿಂದ ಗಿಡಗಿಂಟೆ, ಕಸದ ರಾಶಿ ಹಾಗೂ ಡೆಬ್ರಿಸ್‌ನ್ನು ಕಸ ವಿಲೇವಾರಿ ಗುತ್ತಿಗೆದಾರರಿಂದ ಹಾಗೂ ಸಿಲ್ಟ್ ಟ್ರ್ಯಾಕ್ಟರ್‌ನಿಂದ ತೆರವುಗೊಳಿಸಲು ಸಂಬಂಧಪಟ್ಟ ಸಹಾಯಕ ಅಭಿಯಂತರರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಕ್ರಮ ವಹಿಸುವುದು.

ಈ ತೆರವು ಕಾರ್ಯಕ್ಕೆ ಕಲಂ 257 (ಬಿ) ರಡಿ ಉಲ್ಲೇಖದ ಸುತ್ತೋಲೆಯ ದಿನಾಂಕ:- 27/07/2015 ರಲ್ಲಿ ನಿವೇಶನದ ಪ್ರತಿ ಚದರಡಿಗೆ ನಿಗದಿಪಡಿಸಿದ ಶುಲ್ಕ ರೂ.2.00 ಅನ್ನು ಪರಿಷ್ಕೃತಗೊಳಿಸಿ, ರೂ.5.00/ಚ.ಅ. ಅಥವಾ ಡೆಬ್ರಿಸ್ ವಿಲೇ ಮಾಡಿದ ನೈಜ ವೆಚ್ಚ ಯಾವುದು ಹೆಚ್ಚು ಅದನ್ನು ನಿವೇಶನದ/ಸ್ವತ್ತಿನ ಮಾಲೀಕರಿಂದ ವಸೂಲಿ ಮಾಡುವುದು. ಈ ರೀತಿಯಾಗಿ ತಗಲಿದ ವೆಚ್ಚ ಮೊತ್ತದ ವಿವರಗಳನ್ನು ಆನ್‌ಲೈನ್‌ನಲ್ಲಿ ಸ್ವತ್ತಿನ ಪಿ.ಐ.ಡಿ. ಅಥವಾ ಸರ್ವೆ ನಂ.ಸಂಖ್ಯೆಯಡಿ ಕಂದಾಯ ರಶೀದಿಯಲ್ಲಿನ ಇತರೆ ಅಂಕಣದಲ್ಲಿ ದಾಖಲಿಸುವುದು ಹಾಗೂ ಈ ಶುಲ್ಕವನ್ನು ಕಲಂ 470 ರಂತೆ ಕಂದಾಯದ ಬಾಕಿಯಾಗಿ ವಸೂಲಿ ಮಾಡಲು ಸಂಬಂಧಪಟ್ಟ ಕಂದಾಯ ಅಧಿಕಾರಿಗಳು ಕ್ರಮವಹಿಸುವುದು.

(ಎ) ಸ್ವತ್ತಿನ ಮಾಲೀಕರಿಗೆ ನಿವೇಶನವನ್ನು ಸ್ವಚ್ಛಗೊಳಿಸಲು ನೋಟೀಸು ಜಾರಿ ಮಾಡಿ ನಿಗದಿತ ಸಮಯದಲ್ಲಿ ತೆರವುಗೊಳಿಸಲು ವಿಫಲರಾದಲ್ಲಿ ಅಂತಹ ಮಾಲೀಕರಿಗೆ ಸಕ್ಷಮ ಪೋಲಿಸ್ ಠಾಣಾಧಿಕಾರಿಗೆ ಕಲಂ 462 (2) ರಡಿ ಲಿಖಿತ ದೂರು ಸಲ್ಲಿಸುವುದು ಹಾಗೂ ಪಾಲಿಕೆಯು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆಯ 1976ರ ಕಲಂ 431 ರ ಅಡಿಯಲ್ಲಿ ನಿಗಧಿಪಡಿಸಿದ ದಂಡವನ್ನು ವಿಧಿಸಲು ಕ್ರಮವಹಿಸುವುದು.

(ಬಿ) ಮೇಲ್ಕಂಡಂತೆ ಪಾಲಿಕೆ ಸೂಚನೆ ಮತ್ತು ಆದೇಶವನ್ನು ಸ್ವತ್ತಿನ ಮಾಲೀಕರು ಉಲ್ಲಂಘಿಸಿದ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಯು ಮಾನ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ದಂಡ ಪ್ರಕ್ರಿಯಾ ಸಂಹಿತೆ ಕಲಂ 200 ರ ಅಡಿಯಲ್ಲಿ ಖಾಸಗಿ ದುರು ಸಲ್ಲಿಸತಕ್ಕದ್ದು.

ಸಂಬಂಧಪಟ್ಟ ವಾರ್ಡ್ ಅಭಿಯಂತರರು, ಆರೋಗ್ಯ ಪರಿವೀಕ್ಷಕರು ಮತ್ತು ಘನತ್ಯಾಜ್ಯ ನಿರ್ವಹಣೆಯ ಅಭಿಯಂತರರು ಯಾವುದೇ ದೂರುಗಳಿಗೆ ಅವಕಾಶ ನೀಡದೇ ಈ ಮೇಲಿನ ಸೂಚನೆಗಳನ್ನು ಪಾಲಿಸಲು ಸೂಚಿಸಿದೆ.

(ಸಹಿ) 11/3/2020
ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

<u>ಪ್ರತಿಯನ್ನು:</u>

- ಪೂಜ್ಯ ಮಹಾಪೌರರು/ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
- ವಿಶೇಷ ಆಯುಕ್ತರು (ಯೋಜನೆ)/(ಘ.ತ್ಯಾ.ನಿ)/ (ಕಂದಾಯ) / ಅಪರ ಆಯುಕ್ತರು (ಆಡಳಿತ) ರವರಿಗೆ ಕಳುಹಿಸಿದೆ.
- ಅಪರ/ಜಂಟಿ ಆಯುಕ್ತರು (ಪಶ್ಚಿಮ/ ದಕ್ಷಿಣ / ಪೂರ್ವ/ ಯಲಹಂಕ / ದಾಸರಹಳ್ಳಿ / ಮಹದೇವಪುರ/ ರಾಜರಾಜೇಶ್ವರಿ ನಗರ/ ಬೊಮ್ಮನಹಳ್ಳಿ ವಲಯ) ರವರ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
- ಪ್ರಧಾನ ಅಭಿಯಂತರರು ಹಾಗೂ ಎಲ್ಲಾ ವಲಯದ ಮುಖ್ಯ ಅಭಿಯಂತರರಿಗೆ ಕಳುಹಿಸುತ್ತಾ ಕಾರ್ಯಪಾಲಕ ಅಭಿಯಂತರರು / ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ / ಕಿರಿಯ ಅಭಿಯಂತರರಿಗೆ ಕಟ್ಟುನಿಟ್ಟಾಗಿ ಪಾಲಿಸುವಂತೆ ಕ್ರಮವಹಿಸುವುದು.
- ಜಂಟಿ ಆಯುಕ್ತರು (ಕಂದಾಯ)/ ಕಂದಾಯ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
- ಮುಖ್ಯ ಆರೋಗ್ಯಾದಿಕಾರಿ, ಆರೋಗ್ಯಾಧಿಕಾರಿ (ಪಶ್ಚಿಮ/ ದಕ್ಷಿಣ / ಪೂರ್ವ/ ಯಲಹಂಕ / ದಾಸರಹಳ್ಳಿ / ಮಹದೇವಪುರ/ ರಾಜರಾಜೇಶ್ವರಿ ನಗರ/ ಬೊಮ್ಮನಹಳ್ಳಿ ವಲಯ) ರವರ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
- ಕಾನೂನು ಕೋಶದ ಮುಖ್ಯಸ್ಥರ ಮಾಹಿತಿಗಾಗಿ ಹಾಗೂ ಪಾಲಿಕೆಯ ಎಲ್ಲಾ ವಕೀಲರಿಗೆ ಕಳುಹಿಸಿ ಸುತ್ತೋಲೆಯ ವಿಷಯದಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ತಿಳಿಸಿದೆ.
- ಕಛೇರಿ ಪ್ರತಿ.